**ಓ ಎಸ್ ನಂ 31/2015**

**ಡಿ. ಡಬ್ಲ್ಯೂ ಃ 1**

**ದಿಃ 27.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 5 ರವರ ಪರ ಶ್ರೀ ಜಿ ಎನ್ ವಕೀಲರಿಂದಃ**

ಪ್ರತಿವಾದಿ 5 ರವರ ರಾಮಯ್ಯ ನವರ ಮಗಳು ಎಂದರೆ ಸರಿ. ದಾವಾ ಸ್ವತ್ತುಗಳು ಮೂಲತಃ ರಾಮಯ್ಯ ನವರಿಗೆ ಸೇರಿದ ಸ್ವತ್ತುಗಳೆಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನಿ ಪಿ 6 ಮತ್ತು 7 ರಲ್ಲಿ ಮಾರಾಟವಾಗಿರುವ ಕ್ರಯಪತ್ರದಲ್ಲಿ ಪ್ರತಿವಾದಿ 5 ರವರು ಪಕ್ಷಗಾರರಲ್ಲ ಎಂದರೆ ನನಗೆ ಗೊತ್ತಿಲ್ಲ.ರಾಮಯ್ಯ ನವರ ಎಲ್ಲ ಮಕ್ಕಳ ನಡುವೆ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ರಾಮಯ್ಯನವರ ಎಲ್ಲ ಮಕ್ಕಳಿಗೆ ಭಾಗ ಇರುತ್ತದೆ ಎಂದರೆ ಸರಿಯಲ್ಲ. ನಿ ಪಿ 8 ರಲ್ಲಿ ಪ್ರತಿವಾದಿ 5 ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ 2002 ರಲ್ಲಿ ಭಾಗ ಆಗಿರುವುದರಿಂದ ಪ್ರತಿವಾದಿ 5 ರವರನ್ನು ಪಕ್ಷಗಾರರನ್ನಾಗಿ ಮಾಡುವ ಅಗತ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಜಂಟಿ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ರಾಮಯ್ಯ ನವರು ಬದುಕಿದ್ದ ಮತ್ತು ಅವರು ತೀರಿಕೊಂಡ ನಂತರ ಯಾವುದೇ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 5 ರವರಿಗೆ ಭಾಗ ಕೊಡಬಾರದು ಎಂದು ನಾವು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**